ಓ.ಎಸ್. ನಂಃ 92/2022
ಪಿ.ಡಬ್ಲ್ಯೂ-1 (ಗೀತಾ)

ದಿನಾಂಕ: 26-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಡಿ.ಎಸ್.ಬಿ. ಪ್ರತಿವಾದಿ 5 ರಿಂದ 8 ರವರ ಪರ ವಕೀಲರಿಂದಃ**

ನಮ್ಮ ತಂದೆ ಬಾಳಪ್ಪ ಇವರ ತಂದೆಯ ಹೆಸರು ತುಳಜಪ್ಪ ಎಂದರೆ ಸರಿ. ನನ್ನ ಅಜ್ಜನಿಗೆ ನನ್ನ ತಂದೆ ಬಾಳಪ್ಪ ಹಾಗೂ ಬಾಗವ್ವ ಮತ್ತು ದುಂಡವ್ವ ಎಂದು ಮಕ್ಕಳು ಎಂದರೆ ಸರಿ. ಬಾಗವ್ವ ಇವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಬಾಗವ್ವ ಇವರಿಗೆ ಪ್ರತಿವಾದಿ 6 ರಿಂದ 8 ವಾರಸುದಾರರು ಎಂದರೆ ಸರಿ.

2. ದಾವಾ ಜಮೀನುಗಳು ನಮ್ಮ ಅಜ್ಜನ ಆಸ್ತಿಗಳು ಎಂದರೆ ಸರಿ. ನನ್ನ ಅಜ್ಜ ತೀರಿಕೊಂಡ ನಂತರ ಸದರಿ ಆಸ್ತಿಗಳು ನನ್ನ ತಂದೆ ಹಾಗೂ ಅವರ ಸಹೋದರಿಯರಿಗೆ ಬಂದಿರುತ್ತವೆ ಎಂದರೆ ಸರಿ. ಬಾಗವ್ವ ಮತ್ತು ದುಂಡವ್ವ ಇವರಿಗೆ ನ್ಯಾಯಾಲಯದಲ್ಲಿ ಹಾಗೂ ಉಪ-ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ದಾವಾ ಜಮೀನುಗಳಲ್ಲಿ ಯಾವುದೇ ಪಾಲು ಆಗಿರುವುದಿಲ್ಲ. ಬಾಗವ್ವ ಮತ್ತು ದುಂಡವ್ವ ದಾವಾ ಜಮೀನುಗಳಲ್ಲಿ ತಮಗೆ ಪಾಲು ಬೇಡ ಎಂದು ಹೇಳಿ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ.

3. ಪ್ರತಿವಾದಿ 5 ರಿಂದ 8 ಈ ದಾವೆಗೆ ತಕರಾರು ಸಲ್ಲಿಸಿದ್ದನ್ನು ನಾನು ನೋಡಿಲ್ಲ. ಸದರಿ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ದಾವಾ ಜಮೀನುಗಳಲ್ಲಿ ತಮಗೆ 1/3 ಪಾಲು ಬಂದಿದೆ ಆ ಪಾಲನ್ನು ತಮ್ಮ

ಸ್ವಖುಷಿಯಿಂದ 3ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದೇವೆ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನುಗಳ ಉತಾರಗಳಲ್ಲಿ 3ನೇ ಪ್ರತಿವಾದಿಯ ಹೆಸರು ದಾಖಲ ಇರುತ್ತದೆ ಎಂದರೆ ಸರಿ.

4. ನನ್ನ ಮದುವೆ 1995 ರಲ್ಲಿ ಆಗಿದೆ. ನನಗೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇದ್ದಾಳೆ. ನನ ಮಕ್ಕಳ ವಿದ್ಯಾಭ್ಯಾಸ ಮುಗಿದಿದೆ. ಮರಡೀಮಠದಲ್ಲಿ ನನ್ನ ಗಂಡನ ಹೆಸರಿನಲ್ಲಿ ಮನೆ ಇದೆ, ಆ ಮನೆಯಲ್ಲಿಯೇ ನಾವು ವಾಸ ಇದ್ದೇವೆ ಎಂದರೆ ಸರಿ. ದಾವಾ ಆಸ್ತಿಗಳ ಪೈಕಿ ದಾವಾ ಮನೆ ನಂ.1443 ಎಂದರೆ ಸರಿ. ಸದರಿ ಆಸ್ತಿ ಮೂಲತಃ ಯಾರ ಹೆಸರಿನಲ್ಲಿ ಇತ್ತು ಎಂದರೆ ನಮ್ಮ ತಂದೆಯ ಹೆಸರಿನಲ್ಲಿ ಇತ್ತು. ಸದರಿ ಆಸ್ತಿ ನಮ್ಮ ತಂದೆಯ ಹೆಸರನಲ್ಲಿ ಇತ್ತು ಎಂದು ತೋರಿಸಲು ಮನೆ ಉತಾರ ಕೊಟ್ಟಿರುತ್ತೇನೆ. ಸದರಿ ಮನೆ ಆಸ್ತಿ ಮೊದಲು ನಮ್ಮ ತಂದೆಯ ಹೆಸರಿನಲ್ಲಿ ಇತ್ತು, ನಾನು ಮನೆ ಆಸ್ತಿಯ ಉತಾರ ಕೊಟ್ಟಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಜಿ.ಪಿ.ಸಿ. ನಂ.1443 ಈ ಮೊದಲು ಮಹಾದೇವಿ ಶ್ರೀಕಾಂತ ನಾವಿ ಇವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಮಹಾದೇವಿ ಶ್ರೀಕಾಂತ ನಾವಿ ಇವರು ಸದರಿ ಆಸ್ತಿಗೆ 3ನೇ ಪ್ರತಿವಾದಿಯ ಹೆಸರಿಗೆ ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು 2009 ರಲ್ಲಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಕ್ಕು ಬಿಟ್ಟು ಕೊಟ್ಟ ಪತ್ರದ ಪ್ರಕಾರ ಜಿ.ಪಿ.ಸಿ. ನಂ.1443 ಕ್ಕೆ 3ನೇ ಪ್ರತಿವಾದಿಯ ಹೆಸರು ದಾಖಲ ಆಗಿದೆ ಎಂದರೆ ಸರಿಯಲ್ಲ.

6. ದಾವಾ ಜಮೀನುಗಳಿಗೆ ಪಂಪ್-ಸೆಟ್ ಕೂಡ್ರಿಸಿದ ಬಗ್ಗೆ ಹಾಗೂ ದಾವಾ ಜಮೀನುಗಳಿಗೆ ನೀರಾವರಿ ಸೌಲಭ್ಯ ಇದ್ದ ಬಗ್ಗೆ ಯಾವುದೇ ದಾಖಲೆ ಹಾಜರ ಮಾಡಿಲ್ಲ. ದಾವಾ ಜಮೀನುಗಳಲ್ಲಿ ಕಬ್ಬು ಬೆಳೆಯುತ್ತೇವೆ. ಸದರಿ ಜಮೀನುಗಳಿಗಂದ ವರ್ಷಕ್ಕೆ ಎಷ್ಟು ಲಾಭ ಬರುತ್ತದೆ ಎಂದು ತೋರಿಸಲು ದಾಖಲೆ ಹಾಜರ ಮಾಡಿಲ್ಲ.

7. 3ನೇ ಪ್ರತಿವಾದಿ ಸತೀಶ ಶುಗರ್ಸ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. 3ನೇ ಪ್ರತಿವಾದಿ ಯಾವ ವರ್ಷದಲ್ಲಿ ಸತೀಶ ಶುಗರ್ಸ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಗೆ ಎಷ್ಟು ಸಂಬಳ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನುಗಳಿಂದ ಬಂದ ಉತ್ಪನ್ನದಲ್ಲಿ ಮನೆ ನಡೆಸಲು ಅಗದೇ ಇದ್ದುದ್ದಕ್ಕಾಗಿ 3ನೇ ಪ್ರತಿವಾದಿ ಸತೀಶ ಶುಗರ್ಸ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದಾರೆ ಎಂದರೆ ಸರಿ. 3ನೇ ಪ್ರತಿವಾದಿ ತಮ್ಮ ನೌಕರಿಯಿಂದ ಬಂದ ಆದಾಯದಲ್ಲಿ ಜಿ.ಪಿ.ಸಿ ನಂ.1443 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ತಮ್ಮ ನೌಕರಿಯಿಂದ ಬಂದ ಆದಾಯದಲ್ಲಿ ಉಳಿತಾಯ ಮಾಡಿ ಮನೆ ಕಟ್ಟಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 5 ರಿಂದ 8 ರವರು ಜಿ.ಪಿ.ಸಿ ನಂ.1443 ರಲ್ಲಿ ತಮ್ಮದು ಏನು ಪಾಲು ಇಲ್ಲ ಎಂದು ಹೇಳುತ್ತಾರೆ ಎಂದರೆ ಸರಿಯಲ್ಲ. ದಾವಾ ಜಮೀನುಗಳಿಂದ ಬಂದ ಆದಾಯದಿಂದ ಜಿ.ಪಿ.ಸಿ ನಂ.1443 ರಲ್ಲಿ ಮನೆ ಕಟ್ಟಿಸಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂಃ 92/2022
ಪಿ.ಡಬ್ಲ್ಯು-1 (ಗೀತಾ)

8. ಜಿ.ಪಿ.ಸಿ ನಂ.1443ಕ್ಕೆ 3ನೇ ಪ್ರತಿವಾದಿಯ ಹೆಸರು ಹಚ್ಚಿದ್ದಕ್ಕೆ ನಾನು ಯಾವುದೇ ತಕರಾರು ಸಲ್ಲಿಸಿಲ್ಲ. ಸದರಿ ಆಸ್ತಿಯಲ್ಲಿ ಮನೆ ಕಟ್ಟಲು ನಾನು ದುಡ್ಡ ಕೊಟ್ಟ ಬಗ್ಗೆ ಯಾವುದೇ ದಾಖಲೆ ಹಾಜರ ಮಾಡಿಲ್ಲ. ಏನಾದರು ಮಾಡಿ ದಾವಾ ಆಸ್ತಿಗಳಲ್ಲಿ ಪಾಲು ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಮ್ಮ ತಂದೆ ದಾವಾ ಜಮೀನುಗಳಿಗೆ 3ನೇ ಪ್ರತಿವಾದಿಯ ಹೆಸರು ದಾಖಲಿಸಿದ್ದರ ವಿರುದ್ದ ನಾನು ಯಾವುದೇ ಅಪೀಲು ಸಲ್ಲಿಸಿಲ್ಲ. ಜಿ.ಪಿ.ಸಿ ನಂ.1443 3ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಜಿ.ಪಿ.ಸಿ ನಂ.1443 ರಲ್ಲಿರುವ ಮನೆಯ ಚಕ್ಕಬಂದಿ ಹೇಳಲು ಬರುವುದಿಲ್ಲ. 3ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ಮಕ್ಕಳು ಜಿ.ಪಿ.ಸಿ ನಂ.1443 ರಲ್ಲಿರುವ ಮನೆಯಲ್ಲಿ ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಪಾಲು ಇಲ್ಲದೇ ಇದ್ದರೂ ಸಹ ಬೇರೆಯವರ ಮಾತು ಕೇಳಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ